
ಇವನಿಗೇನಾಗಿದೆ ಎಂದುಕೊಂಡಾರು... ನಕ್ಕಾರು. ಅದೆಷ್ಟೋ ಸಲ ಯಾರಿಗೂ ಹೇಳಲಾಗದ್ದನ್ನು ಅಮ್ಮನಿಗೆ ಹೇಳಿ ಮನಸ್ಸು ಹಗುರವಾಗಿಸಿಕೊಂಡಿದ್ದೆ. ಈಗೀಗ ನಾನು ಮನೆ ತಲುಪುವಾಗ ರಾತ್ರಿ ಹತ್ತುಗಂಟೆಯಾಗುತ್ತಿತ್ತು. ಅಷ್ಟು ಹೊತ್ತಿಗೆ ಅಮ್ಮ ಮಲಗಿರುತ್ತಾಳೇನೋ ಎಂದು ಫೋನ್ ಮಾಡಿರಲಿಲ್ಲ. ಹಕ್ಕಿಯ ಬಗ್ಗೆ ಈಗಲೇ ಹೇಳಿಬಿಡೋಣ ಅನ್ನಿಸಿತು. ಮೊಬೈಲಿನಿಂದ ಅಮ್ಮನಿಗೆ ಫೋನ್ ಮಾಡಿದೆ. ಹಲೋ ಎಂದ ಕೂಡಲೆ ಗುರುತು ಹಿಡಿದು ಲೋಕಾಭಿರಾಮ ಎಲ್ಲವನ್ನೂ ಒಪ್ಪಿಸುವುದು ಅವಳ ಶೈಲಿ. ಕುಟುಂಬದವರ, ಪರಿಚಯದವರ, ಊರಿನವರೆಲ್ಲರ ಕತೆ ಹೇಳಿ ಮುಗಿಸಿದ ಮೇಲೆ, “ನಿಮ್ಮದೇನು ವಿಶೇಷ?” ಅಂತ ಆಕೆಯೇ ಕೇಳುವಾಗ ನಮಗೆ ಅವಕಾಶ. ಆಕೆ ಹೇಳಿದ್ದನ್ನೆಲ್ಲ ಕೇಳಿ ಕೊನೆಗೆ ನಾನು, “ಅಮ್ಮ ಒಂದು ಬೂರುಗದ ಹಕ್ಕಿ ನನ್ನೊಂದಿಗೆ ಕಾರಿನ ಬಾನೆಟ್ಟಿನಲ್ಲಿ ದಿನಾ ಪ್ರಯಾಣಿಸುತ್ತೆ” ಅಂದೆ. “ಹೌದಾ... ಇದು ಸೋಜಿಗ” ಎಂದವಳಿಗೆ ಮೂರುದಿನದ ಅದರ ಎಲ್ಲ ಸ್ವಾರಸ್ಯಗಳನ್ನು ಹೇಳಿ ಮುಗಿಸಿದೆ. “ಇದು ಇಂಟರೆಸ್ಟಿಂಗಿದೆ. ಫೋಟೊ ತೆಗೆದು ಕಳುಹಿಸು... ವಿಡಿಯೊನೇ ಮಾಡು. ನನಗೆ ಅಲ್ಲಿ ಬಂದು ನೋಡುವಷ್ಟು ಕುತೂಹಲ ಕಣೋ” ಎಂದು ಆಕೆ ಸಂತಸದಿಂದ ಹೇಳಿದಳು.



ಮರುದಿನ ಮಧ್ಯಾಹ್ನ ಒಂದು ಮೀಟಿಂಗಿಗೆ ಹೋಗಬೇಕಿತ್ತು. ಸ್ವಲ್ಪ ಬೇಗನೇ ಹೊರಟೆ. ಅಶೋಕ ಹೋಟೆಲಿನ ಹಿಂಬದಿಯಲ್ಲಿ ಹಕ್ಕಿ ಎಲ್ಲಿಗೆ ಹೋಗುತ್ತೆ ಎಂಬುದರ ಬಗ್ಗೆ ಏನಾದರೂ ಸುಳಿವು ಸಿಗುತ್ತಾ ಅಂತ ಹುಡುಕುವ ಹುಚ್ಚು ನನ್ನದು. ಅಲ್ಲಿಯೇ ಮೂರು ರೌಂಡು ಹೊಡೆದರೂ ಏನೂ ಸುಳಿವು ಸಿಗಲಿಲ್ಲ. ಸಣ್ಣದೊಂದು ಪಾರ್ಕು, ಮೂರ್ನಾಲ್ಕು ಖಾಲಿ ಸೈಟುಗಳು, ಕಟ್ಟಡಗಳು ಮತ್ತು ರಸ್ತೆಗಳು. ಪಾರ್ಕಿನ ಬಳಿ ಕಾರು ನಿಲ್ಲಿಸಿದೆ. ಒಂದಷ್ಟು ಹಕ್ಕಿಗಳು ಕಂಡು ಬಂದವು. ಅಲ್ಲೇ ಒಂದು ಬೂರುಗದ ಮರ ಸಹಿತ ಕಾಣಿಸಿಕ್ಕಿತು! ಸ್ವಲ್ಪ ಹತ್ತಿರ ಹೋಗಿ ನೋಡಿದೆ. ಅದೇ ಜಾತಿಯ ಹತ್ತಾರು ಹಕ್ಕಿಗಳು! ಇವುಗಳಲ್ಲಿ ನಮ್ಮ ಹಕ್ಕಿ ಯಾವುದು? ಕಂಡುಹಿಡಿಯುವ ಯಾವ ಉಪಾಯವೂ ತೋಚದೆ ಪಾರ್ಕಿಗೆ ಸುತ್ತು ಹಾಕಿ ಪೆಚ್ಚಾಗಿ ಮರಳಿದೆ.

ವಾರದ ಮುಂದಿನೆರಡು ದಿನಗಳಲ್ಲಿ ಹಕ್ಕಿಯ ಪಯಣ ಮಾಮೂಲಿಯಾಯಿತು. ಹೀಗೊಂದು ಹಕ್ಕಿ ದಿನಾ ಬಂದು ಕೂತುಕೊಂಡು ನನ್ನಿಂದ ಡ್ರಾಪ್ ಪಡೆಯುತ್ತಿದೆ ಎಂದು ರಮಾಳಿಗೆ ಹೇಳಿದಾಗ ಆಕೆ ಹೊಟ್ಟೆ ಹುಣ್ಣಾಗುವಂತೆ ನಕ್ಕಳು. ನಿಮ್ಮ ಇಮಾಜಿನೇಶನ್ನಿಗೆ ಒಂದು ಸಲಾಮ್ ಎಂದಳು. ಹತ್ತಿರದ ಮನೆಯವರು ರಾತ್ರಿ ಬಾಲ್ಕನಿಯಲ್ಲಿ ಕಬಾಬ್, ವಡಾಪಾವ್, ಸುಟ್ಟಜೋಳ ಇತ್ಯಾದಿ ತಿಂಡಿ ತಿನ್ನುತ್ತಿರುತ್ತಾರೆ. ಕೆಳಗೇನಾದ್ರೂ ಬಿದ್ದ ಚೂರುಪಾರುಗಳನ್ನು ತಿನ್ನುವ ಹಕ್ಕಿಗಳು ಇರಬಹುದು ಅಷ್ಟೇ.